ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

50 GOLDEN JUBILEE 1964-2014 JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru Dr. Sri Shivarathri Rajendra Mahaswamiji 2015 Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ಪ್ರಕಟಣೆಯ ಕೃಪೆಗಾಗಿ

ದಿನಾಂಕ : 23.10.2016

## ಜನತಂತ್ರವನ್ನು ಗೌರವಿಸಿ ಜಾತ್ಯತೀತೆಯನ್ನು ಎತ್ತಿ ಹಿಡಿದ ಅಪರೂಪದ ಸಂಸ್ಥೆ ಜೆಎಸ್‌ಎಸ್ ಕಾಲೇಜು

– ಶ್ರೀ ಅಡಗೂರು ಎಚ್. ವಿಶ್ವನಾಥ್

ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸುವರ್ಣ ಮಹೋತ್ಸವದ ಪ್ರಯುಕ್ತ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮಾಜಿ ಸಚಿವರು ಹಾಗೂ ಸಂಸದರಾದ ಶ್ರೀ ಅಡಗೂರು ಎಚ್. ವಿಶ್ವನಾಥ್ ಅವರು ಈ ಕಾಲೇಜಿನ ತಮ್ಮ ವಿದ್ಯಾರ್ಥಿ ಜೀವನವನ್ನು ಸಂಸ್ಮರಿಸಿಕೊಳ್ಳುತ್ತಾ "ಮೀಸಲಾತಿ ಕಡ್ಡಾಯವಾಗಿ ಇಲ್ಲದಿದ್ದ ಆ ಕಾಲಮಾನದಲ್ಲಿ ಎಲ್ಲಾ ಜಾತಿ ಧರ್ಮದವರು ಈ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ತನ್ನ ಆರಂಭದ ದಿನದಿಂದಲೂ ಈ ಕಾಲೇಜು ಜನತಂತ್ರವನ್ನು ಗೌರವಿಸುವ ಮತ್ತು ಜಾತ್ಯತೀತೆಯನ್ನು ಎತ್ತಿ ಹಿಡಿದ ಅಪರೂಪದ ಸಂಸ್ಥೆಯಾಗಿದೆ. ಇಲ್ಲಿ ಯಾವುದೇ ರೀತಿಯ ತಾರತಮ್ಯದ ಭಾವನೆಗಳಿಗೆ ಅವಕಾಶವಿಲ್ಲದೆ ಓದಿ ಶಿಕ್ಷಣ ಪೂರೈಸಿದ ದಿವ್ಯ ಅನುಭವ ನಮ್ಮದಾಗಿದೆ. ಈ ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳೆಲ್ಲರೂ ಇಂದು ಬಹುತೇಕ ಸರಕಾರಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಉನ್ನತೋನ್ನತ ಸೇವೆಯಲ್ಲಿದ್ದು ಸಾಧನೆಯನ್ನು ಮಾಡಿರುವುದನ್ನು ಕಾಣಬಹುದಾಗಿದೆ. ನಾನು ಕೇವಲ ಈ ಕಾಲೇಜಿನಲ್ಲಿ ಪದವಿ ಅಷ್ಟೇ ಪಡೆದುಕೊಂಡು ಹೋಗಲಿಲ್ಲ. ಬದಲಿಗೆ ನನ್ನ ಭವಿತವ್ಯದ ನಾಯಕತ್ವದ ಗುಣಗಳನ್ನು ಹಾಗೂ ಸಾಂಸ್ಕೃತಿಕ ಅರಿವಿನೊಂದಿಗೆ ಬದುಕನ್ನು ಕಟ್ಟಿಕೊಂಡಿದ್ದೇನೆ ಎಂದು ಹೇಳಲು ಅಭಿಮಾನವೆನಿಸುತ್ತದೆ" ಎಂದರು.

ಮುಂದುವರೆದು ಮಾತನಾಡುತ್ತಾ "ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅಕ್ಷರದ ಜೊತೆಗೆ ಅನ್ನಗಳಿಕೆಯ ಮಾರ್ಗವನ್ನು ಸಹ ತೋರಿದರು. ಅಂದು ಶ್ರೀ ರಾಜೇಂದ್ರಸ್ವಾಮೀಜಿಯವರು 'ನೀನು ಒಂದು ದೀಪ ಮಾತ್ರವಲ್ಲ ಪಂಜಿನೋಪಾದಿಯಲ್ಲಿ ಮುನ್ನಡೆಯಬೇಕಾದವನು' ಎಂದು ಹಾರೈಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿದ ಕಾರಣದಿಂದಲೇ ರಾಜಕೀಯ ಕ್ಷೇತ್ರದಲ್ಲಿನ ನನ್ನ ಸೇವೆಗೆ ಶಕ್ತಿ ದೊರಕಿತು" ಎಂದು ಗುರುಗಳನ್ನು ನೆನೆದರು. "ಗುರುಗಳ ನುಡಿ ಮತ್ತು ಕಾರ್ಯಚಟುವಟಿಕೆಗಳು ಎಂತಹವರನ್ನು ಸಹ ಮನಪರಿವರ್ತನೆ ಮಾಡುವ ರೀತಿಯಲ್ಲಿ ಇದ್ದದ್ದನ್ನು ಕಂಡ ಅನುಭವಗಳನ್ನು ಹಂಚಿಕೊಂಡರು".

ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯ ಸರಕಾರದ ಸಹಕಾರ ಮತ್ತು ಸಕ್ಕರೆ ಖಾತೆ ಸಚಿವರಾದ ಶ್ರೀ ಎಚ್ ಎಸ್ ಮಹದೇವಪ್ರಸಾದ್‌ರವರು ಮಾತನಾಡುತ್ತಾ "ಈ ಕಾಲೇಜಿನಲ್ಲಿ ತಾವು ಕಳೆದ ವಿದ್ಯಾರ್ಥಿ ಜೀವನದ ಬಹು ಅಮೂಲ್ಯ ಕ್ಷಣಗಳನ್ನು ಮೆಲುಕುಹಾಕಿದರು. ಅಂದು ರಾಜೇಂದ್ರಶ್ರೀಗಳು ಸ್ವತಃ ವಿದ್ಯಾರ್ಥಿಗಳನ್ನು ಕಾಲೇಜಿಗೆ ಪ್ರವೇಶ ಮಾಡಿಸುವುದರಲ್ಲಿ ತೋರುತ್ತಿದ್ದ ಕಾಳಜಿಯನ್ನು ನೆನಪು ಮಾಡಿಕೊಂಡು ನನ್ನನ್ನು ಕೂಡ ಶ್ರೀಗಳೆ ಈ ಕಾಲೇಜಿಗೆ ಪ್ರವೇಶ ಮಾಡಿಸಿದ ಕ್ಷಣವನ್ನು ಹಂಚಿಕೊಂಡರು"

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ವಿಧಾನಪರಿಷತ್ ಸದಸ್ಯರು, ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಆಗಿದ್ದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಅವರು "ಪರಮಪೂಜ್ಯ ಡಾ. ರಾಜೇಂದ್ರ ಶ್ರೀಗಳ ದೂರದರ್ಶಿತ್ವದಿಂದ ಬೆಳವಣಿಗೆ ಕಂಡ ಶಿಕ್ಷಣ ಸಂಸ್ಥೆಗಳಿಂದ ಇಂದು ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಕುಟುಂಬಗಳು ಅಭ್ಯುದಯವನ್ನು ಹೊಂದಿವೆ" ಎಂದು ಅಭಿಪ್ರಾಯಪಟ್ಟರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಮಾಜಿ ಸಚಿವ ಶ್ರೀ ಎಸ್.ಎ. ರಾಮದಾಸ್ ಅವರು ಈ ಕಾಲೇಜಿನಲ್ಲಿ ಕಲಿತ ತಮ್ಮ ಅನುಭವಗಳನ್ನು ನೆನಪಿಸಿಕೊಳ್ಳುತ್ತಾ "ಈ ಕಾಲೇಜು ತಮ್ಮ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸಿಕೊಂಡು ರಾಜಕೀಯ ಜೀವನದಲ್ಲಿ ಯಶಸ್ಸುಗಳಿಸಲು ಪ್ರೇರಣೆ ನೀಡಿದೆ. ಶಿಸ್ತು ಮತ್ತು ಸಮಯ ಪಾಲನೆಯ ಬಗೆಗೆ ಶ್ರೀಯವರು ಹೇಳಿದ ಕಿವಿಮಾತನ್ನು ಇಂದಿಗೂ ನಾನು ಪಾಲಿಸುತ್ತಿದ್ದೇನೆ" ಎಂದು ಹೇಳಿದರು.

ಕಾರ್ಯಕ್ರಮದ ಸಮ್ಮುಖವನ್ನು ವಹಿಸಿದ್ದ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಶರತ್‌ಚಂದ್ರ ಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ "ತಾವು ಈ ಕಾಲೇಜಿನಲ್ಲಿ ಕಳೆದ ವಿದ್ಯಾರ್ಥಿ ಜೀವನ ನನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಲ್ಲಿ ತುಂಬಾ ಸಹಾಯಕವಾಯಿತು. ನನ್ನ ವ್ಯಕಿತ್ವವನ್ನು ರೂಪಿಸಿದ ಟಂಕಸಾಲೆ ಈ ಕಾಲೇಜು" ಎಂದು ನುಡಿದರು.

ಕಾಲೇಜು ಸಮುಚ್ಛಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತ ಕೋರಿದರು. ಸುವರ್ಣ ಮಹೋತ್ಸವ ಆಚರಣಾ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ. ಡಿ. ಎಸ್. ಸದಾಶಿವಮೂರ್ತಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವಂದಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ ಅವರು ನಿರೂಪಿಸಿದರು. ಡಾ. ಎಂ.ಸಿ. ಸರೋಜಮ್ಮಣ್ಣಿಯವರು ಪ್ರಾರ್ಥಿಸಿದರು.

(ಪ್ರೊ ಎಂ ಮಹದೇವಪ್ಪ)

ಪ್ರಾಂಶುಪಾಲರು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಊಟಿ ರಸ್ತೆ ಮೈಸೂರು-25

ಗೆ,

ಸಂಪಾದಕರು

-----------------------------

-----------------------------